ಕ್ರ. ಸಂ.	ತಾಲ್ಲೂಕಿನ ಹೆಸರು	ಹಳದಿ ಪಡಿತರ ಚೀಟಿ ಹೊಂದಿದ ಸಂಖ್ಯೆ	ರದ್ದುಪಡಿಸಿದ ಅನರ್ಹ ಪಡಿತರ ಚೀಟಿಗಳ ಸಂಖ್ಯೆ
1.	ಹಾವೇರಿ	38079	4096
2.	ರಾಣೆಬೆನ್ನೂರ	49722	8391
3.	ಹಾನಗಲ್	43893	4894
4.	ಸವಣೂರ	17635	2191
5.	ಬ್ಯಾಡಗಿ	1 346	1974
6.	ಹಿರೇಕೆರೂರ	4 340	6761
7.	ಶಿಗ್ಗಾಂವ	21001	1209
	ಒಟ್ಟು	228016	29516

642(1264) ಶ್ರೀ ಉದಾಸಿ ಸಿ.ಎಂ. (ಹಾನಗಲ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002–03ನೇ ಸಾಲಿನಲ್ಲಿ ಹಾನಗಲ್ಲ ತಾಲ್ಲೂಕು ಅಕ್ಕಿ ಆಲೂರು ಮತ್ತು ಹಾನಗಲ್ಲ ಹೋಬಳಿಯ ರೈತರಿಗೆ ತಡೆಹಿಡಿದಿರುವ ವಿಮೆ ಪರಿಹಾರವನ್ನು ಮಂಜೂರು ಮಾಡಲಾಗುತ್ತದೆಯೇ;

ಆ) ಹಾಗಿದ್ದಲ್ಲಿ, ಮಂಜೂರು ಮಾಡಿ ಎಂದಿನಿಂದ ಬಿಡುಗಡೆ ಮಾಡಲಾಗುವುದು;

ಇ) ಹಾವೇರಿ ಜಿಲ್ಲೆಯ ರೈತರು ಬೆಳೆ ವಿಮೆಯಿಲ್ಲ ವಂಚಿತರಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಈ) 2004–05ನೇ ಸಾಲಿನಲ್ಲಿ ಹಾನಗಲ್ಲ ಮತ್ತು ಅಕ್ಕಿಆಲೂರು ಹೋಬಳಿಯನ್ನು ಭೀಕರ ಬರಗಾಲ ಪ್ರದೇಶ ಎಂದು ಘೋಷಣೆ ಮಾಡಿದ್ದರೂ ನೀರಾವರಿ ಭತ್ತಕ್ಕೆ ಬೆಳೆ ವಿಮೆ ಪರಿಹಾರ ನೀಡದೆ ಇರುವುದಕ್ಕೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) 2002–03ನೇ ಸಾಲಿನಲ್ಲಿ ಹಾನಗಲ್ಲ ತಾಲ್ಲೂಕು ಅಕ್ಕಿ ಆಲೂರು ಮತ್ತು ಹಾನಗಲ್ಲ ಹೋಬಳಿಯ ರೈತರಿಗೆ ಬೆಳೆ ವಿಮಾ ನಷ್ಟ ಪರಿಹಾರ ವಿತರಿಸುವಲ್ಲಿ ಯಾವುದೇ ಬಾಕಿ ಇಲ್ಲವೆಂದು ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು ತಿಳಿಸಿರುತ್ತದೆ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) 2004–05ನೇ ಸಾಲಿನಲ್ಲಿ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ವಿವಿಧ ಬೆಳೆಗಳನ್ನು ಅಧಿಸೂಚಿಸಿದ್ದು, ಬೆಳೆ ಕಟಾವು ಪ್ರಯೋಗಗಳ

ಪ್ರಕ್ರಿಯೆ ವಿವಿಧ ಹಂತಗಳಲ್ಲಿ ನಡೆಯುತ್ತಿದೆ. ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಇಳುವರಿ ಮಾಹಿತಿ ವಿಮಾ ಸಂಸ್ಥೆಗೆ ಒದಗಿಸಿದೆ. ನಂತರ ಬೆಳೆ ವಿಮಾ ನಷ್ಟ ಪರಿಹಾರ ಲೆಕ್ಕ ಹಾಕಿ ಅಂತಿಮಗೊಳಿಸುತ್ತದೆ.

643(965) ಶ್ರೀ ವೈಜ್ಯನಾಥ ಪಾಟೀಲ್ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಚಿಂಚೋಳಿ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿದ ಎಷ್ಟು ಹಣ ಬಿಡುಗಡೆಯಾಗಿದೆ;

ಆ) ಯಾವ ಕೆಲಸಕ್ಕಾಗಿ ಎಷ್ಟು ಹಣ ಖರ್ಚಾಗಿದೆ?

ಶ್ರೀಮತಿ ಭಾಗೀರಥಿ ಮರಳ ಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಕಳೆದ ಮೂರು ವರ್ಷಗಳಿಂದ ಬಿಡುಗಡೆಯಾದ ಹಣ

(ರೂ. ಲಕ್ಷಗಳಲ್ಲಿ)

2001–02	2002–03	2003–04
108.51	107.26	162.12

ಖರ್ಚಾಗಿರುವ ಹಣ (ರೂ. ಲಕ್ಷಗಳಲ್ಲಿ)

2001–02	2002–03	2003–04
108.51	107.26	162.11

ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಅನುಬಂಧ

ಚಿಂಚೋಳಿ ತಾಲ್ಲೂಕಿನ 2001–02, 2002–03 ಮತ್ತು 2003–04ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ವಿವಿಧ ಯೋಜನೆಗಳಿಗೆ ಖರ್ಚು ಮಾಡಿರುವ ವಿವರ

ಕ್ರ ಸಂ.	ವಿವಿಧ ಯೋಜನೆಗಳು	2001–02 (ಲಕ್ಷಗಳಲ್ಲಿ)	2002–03 (ಲಕ್ಷಗಳಲ್ಲಿ)	2003–04 (ಲಕ್ಷಗಳಲ್ಲಿ)
1.	ಸ್ತ್ರೀ ಶಕ್ತಿ ಗುಂಪುಗಳ ಸದಸ್ಯರ ತರಬೇತಿಗಾಗಿ	–	0.78	3.70
2.	ಸುತ್ತು ನಿಧಿ ಒಂದು ಗುಂಪಿಗೆ ರೂ. 5000–00 ಗಳಂತೆ	12.50	1.25	5.35
3.	ಐಸಿಡಿಎಸ್ ಸಿಬ್ಬಂದಿ ವೇತನ	27.93	36.81	50.62
4.	ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಹೆಚ್ಚುವರಿ ಗೌರವಧನ	7.66	7.60	7.81